### ಉಭಯ ಸದನ ಕಾರ್ಯದರ್ಶಿಗಳಿಂದ ಸುತ್ತೋಲೆ । ಅಧಿವೇಶನದಲ್ಲಿ ಸುಗಮ ಕಲಾಪಕ್ಕೆ ಕ್ರಮ

# ರಾಜ್ಯಪಾಲರ ಭಾಷಣಕ್ಕೆ ಅಡ್ಡಿಪಡಿಸಿದರೆ ಅಮಾನತು

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು



ಜಂಟಿ ಅಧಿವೇಶನದಲ್ಲಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಪ್ರತಿಪಕ್ಷ ಸಿದ್ಧತೆ ನಡೆಸಿಕೊಂಡಿದ್ದರೆ, ಅದಕ್ಕೂ ಮೊದಲೇ ರಾಜ್ಯಪಾಲರ ಭಾಷಣಕ್ಕೆ ಯಾವುದೇ ತೊಡಕಾಗದ ರೀತಿ ಎಚ್ಚರ ವಹಿಸಲು ವಿಧಾನಸಭಾ ಕಾರ್ಯಾಲಯ ಸಿದ್ಧತೆ ನಡೆಸಿಕೊಂಡಿದೆ.

ಕೆಲ ದಿನಗಳ ಹಿಂದೆ ಕೇರಳ ವಿಧಾನಸಭಾ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣಕ್ಕೆ ಅಡ್ಡಿಪಡಿಸಿದ ರೀತಿಯಲ್ಲಿಯೇ, ರಾಜ್ಯದಲ್ಲಿಯೂ ಅಡ್ಡಿಪಡಿಸುವ ಮಾತುಗಳು ಕೇಳಿಬಂದಿರುವುದರಿಂದ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು, ಉಭಯ ಸದನ ಕಾರ್ಯದರ್ಶಿಗಳ ಮೂಲಕ ಸುತ್ತೋಲೆಯನ್ನು ಹೊರಡಿಸಿದ್ದು, ರಾಜ್ಯಪಾಲರ ಭಾಷಣದ ವೇಳೆ ಯಾರಾದರೂ ಮಾತನಾಡಿದರೆ ಅಂತವರನ್ನು ಅಮಾನತುಗೊಳಿಸಲಾಗುವುದು ಎಂದು ಎಚ್ಚರಿಸಿದ್ದಾರೆ.



ಈ ಸಂಬಂಧ ಗುರುವಾರ ಸುತ್ತೋಲೆ ಹೊರಡಿಸಲಾಗಿದ್ದು, ರಾಜ್ಯಪಾಲರ ಭಾಷಣಕ್ಕೆ ಯಾವುದೇ ಸದಸ್ಯರು ಅಡ್ಡಿಪಡಿಸುವುದು ಅಥವಾ ಕ್ರಿಯಾಲೋಪ ಎತ್ತಿದರೆ ಅಂತಹ ಸದಸ್ಯರನ್ನು ಅಮಾನತುಪಡಿಸಲಾಗುವುದು. ರಾಜ್ಯಪಾಲರ ಭಾಷಣಕ್ಕೆ ಮುಂಚಿತವಾಗಿ ಅಥವಾ ನಂತರವಾಗಲಿ ಅಡ್ಡಿಪಡಿಸುವುದು ಇಲ್ಲವೇ ವಿಘ್ನವನ್ನುಂಟು ಮಾಡಿದರೆ ಇದು ಸದನದ ನಿಯಮಾವಳಿಯ ಉಲ್ಲಂಘನೆ ಹಾಗೂ ರಾಜ್ಯಪಾಲರಿಗೆ ತೋರಿದ ಅಗೌರವ ಎಂದು ಪರಿಗಣಿಸಿ ಅಂತಹ ಸದಸ್ಯರನ್ನು ಅಧಿವೇಶನ ಗೊತ್ತುಪಡಿಸಿದ ಅವಧಿಗೆ ಅಮಾನತು ಮಾಡುವುದಾಗಿ ಸ್ಪಷ್ಟಪಡಿಸಿದ್ದಾರೆ.

ಕೇರಳದಲ್ಲಿ ಅಲ್ಲಿನ ಯುಡಿಎಫ್ ಶಾಸಕರು ಕೇಂದ್ರ ಸರಕಾರದ ಪೌರತ್ವ ತಿದ್ದುಪಡಿ ಕಾಯಿದೆ ವಿರೋಧಿಸಿ ರಾಜ್ಯಪಾಲರ ಭಾಷಣಕ್ಕೆ ಅಡ್ಡಿಪಡಿಸಿ ವಿರೋಧ ವ್ಯಕ್ತಪಡಿಸಿದ್ದರು. ಇದು ತೀವ್ರ ವಿವಾದಕ್ಕೆ ಕಾರಣವಾಗಿತ್ತು. ಇನ್ನು ರಾಜ್ಯದಲ್ಲಿಯೂ ಪೌರತ್ವ ತಿದ್ದುಪಡಿ ಕಾಯಿದೆ ವಿರುದ್ಧ ವಿಧಾನಸಭೆಯಲ್ಲಿ ನಿಲುವಳಿ ಮಂಡಿಸುವುದಾಗಿ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿಕೆ ನೀಡಿದ್ದರು. ಇದರಿಂದ ಎಚ್ಚೆತ್ತಿರುವ ಸ್ಪೀಕರ್, ಈ ರೀತಿಯ ಸುತ್ತೋಲೆ ಹೊರಡಿಸಿದ್ದಾರೆ ಎನ್ನಲಾಗಿದೆ.

**ಪ್ರತಿಭಟನೆಗೆ ಸಿದ್ಧತೆ:** ಇನ್ನು ರಾಜ್ಯಪಾಲರ ಭಾಷಣಕ್ಕೆ ಅಡ್ಡಿಪಡಿಸುವ ಬಗ್ಗೆ ಪ್ರತಿಪಕ್ಷಗಳು ಬಹಿರಂಗ ಹೇಳಿಕೆ ನೀಡದಿದ್ದರೂ, ಪೌರತ್ವ ತಿದ್ದುಪಡಿ ಕಾಯಿದೆಯನ್ನು ಪ್ರತಿಭಟಿಸಲು ಸಿದ್ಧತೆ ನಡೆಸಿಕೊಂಡಿದ್ದವು. ಬಿಜೆಪಿ ಅವಧಿಯಲ್ಲಿ ಈ ರೀತಿ ರಾಜ್ಯಪಾಲರ ಭಾಷಣಕ್ಕೆ ಅಡ್ಡಿಪಡಿಸಿದರೆ, ಪಕ್ಷ ಹಾಗೂ ಸರಕಾರ ಮುಜುಗರಕ್ಕೆ ಒಳಗಾಗುತ್ತದೆ. ಇದರೊಂದಿಗೆ ಕೇಂದ್ರ ಸರಕಾರದ ಪೌರತ್ವ ತಿದ್ದುಪಡಿ ಕಾಯಿದೆಯನ್ನು ವಿರೋಧಿಸುವ ಮೂಲಕ ಮತ್ತಷ್ಟು ಇಕ್ಕಟ್ಟಿಗೆ ಸಿಲುಕಿಸುವಂತೆ ಮಾಡಬೇಕು ಎನ್ನುವ ಲೆಕ್ಕಾಚಾರದಲ್ಲಿ ಕಾಂಗ್ರೆಸ್‌ಯಿದೆ. ಆದ್ದರಿಂದ ವಿಧಾನಸಭೆ ಸ್ಪೀಕರ್ ಇದಕ್ಕೆ ಕಡಿವಾಣ ಹಾಕಲು, ಪ್ರತಿಭಟನೆ ನಡೆಸಿದರೆ ಕಲಾಪದಿಂದ ಅಮಾನತುಪಡಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ. ಅಮಾನತು ಆದರೂ ಪ್ರತಿಭಟನೆ ನಡೆಸಬೇಕೇ ಅಥವಾ ಪ್ರತಿಭಟನೆ ಕೈಬಿಡಬೇಕೇ ಎನ್ನುವ ಜಿಜ್ಞಾಸೆಗೆ ಕಾಂಗ್ರೆಸ್ ಬಿದ್ದಿದೆ.

## ಸಹಜ ಪ್ರಕ್ರಿಯೆ

**ಈ ಬಗ್ಗೆ ವಿಧಾನಸಭಾ ಕಾರ್ಯಾಲಯದ ಅಧಿಕಾರಿಯೊಬ್ಬರು ಮಾತನಾಡಿದ್ದು, ರಾಜ್ಯಪಾಲರ ಭಾಷಣಕ್ಕೆ ಅಡ್ಡಿಪಡಿಸುವುದು ಅಥವಾ ಅವರ ಉಪಸ್ಥಿತಿಯಲ್ಲಿ ಅಗೌರವ ಸೂಚಿಸುವುದು ಸರಿಯಲ್ಲ ಎನ್ನುವ ಕಾರಣಕ್ಕೆ ಪ್ರತಿಬಾರಿ ಈ ರೀತಿ ಸುತ್ತೋಲೆ ಹೊರಡಿಸುವುದು ಸಾಮಾನ್ಯ. ಆದರೆ ಈ ಬಾರಿ ಪೌರತ್ವ ತಿದ್ದುಪಡಿ ಕಾಯಿದೆಯ ಗಲಾಟೆ ಜೋರಾಗುವ ಸಾಧ್ಯತೆ ಹೆಚ್ಚಿರುವುದರಿಂದ, ಸಣ್ಣ ಪ್ರಮಾಣದ ಲೋಪದೋಷವೂ ಆಗದಂತೆ ಎಚ್ಚರವಹಿಸಲು ಸ್ಪೀಕರ್ ಹೇಳಿದ್ದಾರೆ. ಇದರೊಂದಿಗೆ ಈ ಬಾರಿ ರಾಜ್ಯಪಾಲರು ಭಾಷಣದ ದಿನ ಅವರು ಬಂದು ಹೋಗುವ ತನಕ ವಿಧಾನಸಭೆಯ ಮೊಗಸಾಲೆ ಸೇರಿದಂತೆ ಎಲ್ಲೆಡೆ ಹೆಚ್ಚು ಮಾರ್ಷಲ್‌ಗಳನ್ನು ಹಾಕುವ ಸಾಧ್ಯತೆಯಿದೆ ಎಂದಿದ್ದಾರೆ.**

> **ಜಂಟಿ ಸದನದಲ್ಲಿ ರಾಜ್ಯಪಾಲರ ಭಾಷಣದ ವೇಳೆ ಮಾತನಾಡಿದರೆ ಅಮಾನತು ಮಾಡುತ್ತೇವೆ ಎನ್ನುವ ಹೇಳಿಕೆ ಶಾಸಕರ ಅಭಿವ್ಯಕ್ತಿ ಸ್ವಾತಂತ್ರ್ಯದ ಹರಣ. ನಮ್ಮ ಹಕ್ಕು ಮೊಟಕುಗೊಳಿಸಲು ಬಿಡಲ್ಲ. ಸದನದಲ್ಲಿ ಒಬ್ಬ ಶಾಸಕ ಮಾತನಾಡಿದರೆ ಅದು ಜನರ ಧ್ವನಿ. ಸ್ಪೀಕರ್ ಸಂವಿಧಾನಾತ್ಮಕ ಚೌಕಟ್ಟಿನಲ್ಲಿ ನಡೆದುಕೊಳ್ಳಲಿ.**
>
> – ಸಿದ್ದರಾಮಯ್ಯ ಪ್ರತಿಪಕ್ಷ ನಾಯಕ